# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.24 ರ ಹೆಚ್.ಬಿ.ಆರ್ ಲೇಔಟ್‌ಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 19-12-2020 ರಂದು ಆಯೋಜಿಸಿದ್ದು, ಸದರಿ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದವರ ವಿವರ:-**

1. ಶ್ರೀ.ಹೆಚ್.ವಿ.ನರೇಂದ್ರ ಕುಮಾರ್, ADTP (North) ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ
2. ಶ್ರೀ ಎಸ್.ರಾಜನ್ ಕಿರಿಯ ಅಭಿಯಂತರರು, ವಾರ್ಡ್ ಸಂಖ್ಯೆ 28 ಉಪಸ್ಥಿತಿ
3. ಶ್ರೀ.ಲಕ್ಷ್ಮಣಪ್ಪ, ಸಿ.ವಿ. ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 24 ಎಚ್.ಬಿ.ಆರ್ ಬಡಾವಣೆ.
4. ಶ್ರೀ. ಮೊಹಮ್ಮದ್ ಇಬ್ರಾಹಿಮ್, (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಇಲಾಖೆ
5. ಶ್ರೀ.ರಾಕೇಶ್.ಎಸ್.ಜಿ, ವಾರ್ಡ್ ಸಮಿತಿಯ ಸದಸ್ಯರು.
6. ಶ್ರೀ ಶ್ರೀಕಾಂತ್ ಅಸೆಸರ್, ಕಂದಾಯ ಇಲಾಖೆ,
7. ಶ್ರೀಮತಿ.ಲತಾ ಗಣೇಶ್, ಸ್ಥಳೀಯರು
8. ಶ್ರೀ ಲಿಂಗರಾಜು, ಮಾರ್ಷಲ್,
9. ಶ್ರೀ.ಮದನ್ ಪ್ರಸಾದ್ ವಾರ್ಡ್ ಸಮಿತಿಯ ಸದಸ್ಯರು,
10. ಶ್ರೀಮತಿ. ಮೀನಾ.ಬಿ, ಕಿರಿಯ ಆರೋಗ್ಯ ಪರಿವೀಕ್ಷಕರು ವಾ-24
11. ಶ್ರೀ. ಪ್ರಸನ್ನ.ಎ.ಆರ್, ವಾರ್ಡ್ ಸಮಿತಿಯ ಸದಸ್ಯರು.
12. ಶ್ರೀ.ವಿಕ್ರಂ.ಎಂ.ವಿ, ಸ್ಥಳೀಯರು,
13. ಶ್ರೀ.ಯಾಸೀನ್, ಸ್ಥಳೀಯರು
14. ಶ್ರೀ.ಅಶೋಕ್, ಸ್ಥಳೀಯರು
15. ಶ್ರೀ.ಜೆ.ಅಲೆಕ್ಸಾಂಡರ್ ವಿಜಯ್ ಕುಮಾರ್, ಸ್ಥಳೀಯರು
16. ಶಶಿ ಕುಮಾರ್, ಸ್ಥಳೀಯರು
17. ಶ್ರೀ ಪ್ರತಾಪ್, ಸ್ಥಳೀಯರು,
18. ಶ್ರೀ.ರಮೇಶ್.ಎಂ, ಸ್ಥಳೀಯರು
19. ಶ್ರೀ ಪಿಚಾಂಡಿ, ಸ್ಥಳೀಯರು,
20. ಶ್ರೀ ನಾರಾಯಣಸ್ವಾಮಿ, ಸ್ಥಳೀಯರು,
21. ಶ್ರೀ.ಶ್ರೀನಿವಾಸ್, ಸ್ಥಳೀಯರು

ಕಾರ್ಯಪಾಲಕ ಅಭಿಯಂತರರ ಕಛೇರಿ ಸಂ. 568 ದಿನಾಂಕ 06-01-2021 ಹೆಚ್.ಬಿ.ಆರ್. ಬಡಾವಣೆ ಉಪ ವಿಭಾಗ

ಕಾರ್ಯಪಾಲಕ ಅಭಿಯಂತರರ ಕಛೇರಿ ಸಂ. 587 ದಿ. 2/1/21 ಬೆಂಗಳೂರು-1 ಸರ್ವಜ್ಞನಗರ

ಮುಖ್ಯ ಅಭಿಯಂತರರು (ಪೂರ್ವ) ಸಂಖ್ಯೆ: 1636 ದಿನಾಂಕ: 31/12/2020 ಬೆಂಗಳೂರು, ಮಹಾನಗರ ಪಾಲಿಕೆ

AE-24

JR 6/1/2021

S.DG(HBR)

ಈ ಸಭೆಯ ಪ್ರಾರಂಭಕ್ಕೆ ಮೊದಲು ವಾರ್ಡ್ ಸಂಖ್ಯೆ 24 ಎಚ್.ಬಿ.ಆರ್ ಬಡಾವಣೆ ಇಲ್ಲಿ ಕಿರಿಯ ಅಭಿಯಂತರರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ರಾಜನ್‌ರವರು ವಾರ್ಡ್ ಸಂಖ್ಯೆ 24ರಲ್ಲಿ ಸಹಾಯಕ ಅಭಿಯಂತರರಾಗಿ ಕಾರ್ಯ ನಿರ್ವಹಿಸಲು ನೂತನವಾಗಿ ವರದಿ ಮಾಡಿಕೊಂಡಿರುವ ಶ್ರೀ ಸಿ.ವಿ.ಲಕ್ಷ್ಮಣಪ್ಪ ರವರನ್ನು ಸಭೆಗೆ ಹಾಜರಿದ್ದ ನೋಡಲ್ ಅಧಿಕಾರಿಗಳಿಗೆ ಮತ್ತು ಸ್ಥಳೀಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಪರಿಚಯಿಸಿ ಸಭೆಯನ್ನು ಪ್ರಾರಂಭಿಸಲು ಕೋರಿದರು.

mcl 2/1/21

ಅದರಂತೆ ಇಂದಿನ ಸಭೆಗೆ ಆಗಮಿಸಿದ್ದ ಸಮಿತಿಯ ಸದಸ್ಯರನ್ನು/ಅಧಿಕಾರಿಗಳನ್ನು, ಮತ್ತು ಸ್ಥಳೀಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರಾದ ಶ್ರೀ ಸಿ.ವಿ.ಲಕ್ಷ್ಮಣಪ್ಪ ರವರು ಆದರದ ಸ್ವಾಗತವನ್ನು ಕೋರುವ ಮುಖಾಂತರ ಸಭೆಯನ್ನು ಪ್ರಾರಂಭಿಸಲಾಯಿತು.

## 1) ಶ್ರೀ ಪ್ರತಾಪ್, ಸ್ಥಳೀಯರು ಈ ಕೆಳಕಂಡ ವಿಷಯಗಳ ಬಗ್ಗೆ ವಾರ್ಡ್ ಕಮಿಟಿ ಸಭೆಯಲ್ಲಿ ಪ್ರಸ್ತಾಪಿಸಿದರು.

- 14ನೇ ಮುಖ್ಯರಸ್ತೆ ಇಂದ 19ನೇ ಮುಖ್ಯರಸ್ತೆ, 5ನೇ ಬ್ಲಾಕ್‌ನಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮ ರವರು ಕುಡಿಯುವ ನೀರನ್ನು ದಿನಕ್ಕೆ ಮೂರು (03) ಬಾರಿ ಬಿಡುತ್ತಿರುತ್ತಾರೆ ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

  **(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಫ್ರೆಜರ್‌ಟೌನ್)**

FR (Savwsmd NBL) 3.1.21

➢ ವಾರ್ಡ್ ವ್ಯಾಪ್ತಿಯ 18ನೇ ಮುಖ್ಯರಸ್ತೆ, ಕೆ.ಇ.ಬಿ ರಸ್ತೆ ಹಾಗೂ ಕೆಲವು ಪ್ರದೇಶಗಳಲ್ಲಿ ಸಾರ್ವಜನಿಕರು ಚರಂಡಿ ನೀರನ್ನು ಬೃ ನೀರುಗಾಲುವೆಗೆ ಬಿಡುತ್ತಿರುವುದರಿಂದ ದುರ್ವಾಸನೆ ಬರುತ್ತಿದ್ದು, ಬೃಹತ್ ನೀರುಗಾಲುವೆ ಅಕ್ಕ ಪಕ್ಕದ ನಿವಾಸಿಗ ವಾಸನೆಯಿಂದ ತೊಂದರೆಯಾಗುತ್ತಿರುವುದನ್ನು ತಡೆಗಟ್ಟಲು ಸಭೆಯಲ್ಲಿ ಪ್ರಸ್ತಾಪಿಸಿದರು ಹಾಗೂ 18ನೇ ಮುಖ್ಯರಸ್ತೆಯ ಚೇಂಬರ್ ಹಾಳಾಗಿದ್ದು, ಅದನ್ನು ಸರಿಪಡಿಸಬೇಕು.

<u>(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ (ಪೂರ್ವ) ಬಿಬಿಎಂಪಿ)</u>

➢ ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಹಾಳಾಗಿದ್ದು, ಅದನ್ನು ಸರಿಪಡಿಸಲು (ಎಲ್.ಇ.ಡಿ) ಹಾಗೂ ಕೆಲವು ಪ್ರದೇಶದಲ್ಲಿ ಹೊಸದಾಗಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು.

<u>(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ) ಪೂರ್ವ)</u>

➢ ವಾರ್ಡ್ ವ್ಯಾಪ್ತಿಯಲ್ಲಿ ಚಿಕನ್ ಮತ್ತು ಮಟನ್ ಅಂಗಡಿ ಮಾಲೀಕರು ತಮ್ಮ ತಮ್ಮ ಅಂಗಡಿ ತ್ಯಾಜ್ಯವನ್ನು ಬೃಹತ್ ನೀರುಗಾಲುವೆಗೆ ಸುರಿಯುತ್ತಿರುವುದರಿಂದ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಚರಂಡಿಯ ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆಯಾಗುತ್ತಿದ್ದು, ಅದನ್ನು ತಡೆಗಟ್ಟಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.

<u>(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ, ಬಿ.ಬಿ.ಎಂ.ಪಿ)</u>

➢ 2ನೇ, 3ನೇ ಬ್ಲಾಕಿನಲ್ಲಿ 5ನೇ ಬ್ಲಾಕಿನಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲು ತಿಳಿಸಿದರು ಮತ್ತು ಚಿಲ್ಡ್ರನ್ ಪಾರ್ಕ್‌ನಲ್ಲಿ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಬೇಕು. ಸಿಸಿ ಕ್ಯಾಮೆರಾಗಳನ್ನು ಅಳವಡಿಸಬೇಕೆಂದು ಸಭೆಗೆ ತಿಳಿಸಿದರು

<u>(ಕ್ರಮ:- ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ) ಪೂರ್ವ)</u>

➢ 2ನೇ ಮತ್ತು 3ನೇ ಬ್ಲಾಕಿನಲ್ಲಿ ಪೌರ ಕಾರ್ಮಿಕರು ಕಸವನ್ನು ಮನೆ ಮನೆಗಳಿಂದ ಸಮರ್ಪಕವಾಗಿ ಸಂಗ್ರಹಿಸದೇ ಇರುವುದಿಲ್ಲವೆಂದು ಹಾಗೂ ರಸ್ತೆಗಳನ್ನು ಸರಿಯಾಗಿ ಗುಡಿಸುವುದಿಲ್ಲ ಬ್ಲಾಕ್ ಸ್ಪಾಟ್‌ಗಳನ್ನು ಸ್ವಚ್ಛಗೊಳಿಸಬೇಕು, ಖಾಲಿ ನಿವೇಶನದಲ್ಲಿ ಸಾರ್ವಜನಿಕರು ಕಸವನ್ನು ಎಸೆಯುತ್ತಿರುತ್ತಾರೆ, ಹಾಗೂ ವಾರ್ಡ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ ಕಡಿಮೆ ಇರುವುದರಿಂದ ಸಮರ್ಪಕವಾಗಿ ಕಸ ನಿರ್ವಹಣೆ ಕಾರ್ಯ ನಡೆಯುತ್ತಿರುವುದಿಲ್ಲವೆಂದು ಸಭೆಗೆ ತಿಳಿಸಿದರು.

ಶ್ರೀಮತಿ ಜ್ಯೋತಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ರವರು ಘನತ್ಯಾಜ್ಯ ನಿರ್ವಹಣೆ ಬಗ್ಗೆ ಬರುವ ಕುಂದು ಕೊರತೆಗಳನ್ನು ಸರಿಪಡಿಸಲು ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಲು ತಿಳಿಸಿದರೂ ಸಹ ಇಂದಿನ ಸಭೆಗೆ ಮತ್ತೊಮ್ಮೆ ಗೈರು ಹಾಜರಾಗಿರುವುದರಿಂದ ಅವರ ಮೊಬೈಲ್‌ಗೆ ಸಂಪರ್ಕಿಸಿದಾಗ ಅವರು ಆರೋಗ್ಯ ಸರಿಯಿಲ್ಲವೆಂದು ತಿಳಿಸಿ ಸದರಿ ಸಮಸ್ಯೆಯನ್ನು ತುರ್ತಾಗಿ ಸರಿಪಡಿಸುವುದಾಗಿ ತಿಳಿಸಿರುತ್ತಾರೆ.

<u>(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ, ಬಿ.ಬಿ.ಎಂ.ಪಿ)</u>

➢ ಹೊರವರ್ತುಲ ರಸ್ತೆಯ ಅರಣ್ಯ ಪಾರ್ಕ್ ಹತ್ತಿರ ಸ್ಕೈ ವಾಕ್‌ನ್ನು ನಿರ್ಮಿಸಬೇಕೆಂದು ತಿಳಿಸಿದರು. ಸದರಿ ಸ್ಕೈ ವಾಕ್‌ನ್ನು ನಿರ್ಮಿಸಲು ಉದ್ದೇಶಿಸಿರುವ ಸ್ಥಳವು ಸಾರ್ವಜನಿಕರಿಗೆ ಅನುಕೂಲವಾಗುವ ಬದಲಾಗಿ ಅನಾನುಕೂಲ ಹೆಚ್ಚಾಗುವ ಕಾರಣದಿಂದಾಗಿ ಹಾಲಿ ಇರುವ ಸ್ಕೈ ವಾಕ್‌ನಿಂದ 500 ಮೀಟರ್ ನಿಂದ 750 ಮೀಟರ್ ದೂರದಲ್ಲಿ ನಿರ್ವಹಣೆ ಮಾಡಲು ಸದಸ್ಯರು ಸಭೆಯಲ್ಲಿ ತಿಳಿಸಿದ ಹಿನ್ನೆಲೆಯಲ್ಲಿ ಈ ವಿಷಯವನ್ನು ರಸ್ತೆ ಮತ್ತು ಮೂಲಭೂತ ಸೌಕರ್ಯಗಳ ವಿಭಾಗಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳವಂತೆ ತಿಳಿಸಲಾಯಿತು.

<u>(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ (ಪೂರ್ವ))</u>

ಈ ಹಿಂದಿನ ಸಭೆಯಲ್ಲಿ ಪ್ರಸ್ತಾಪವಾದ ಮೇಲಿನ ಎಲ್ಲಾ ಸಾರ್ವಜನಿಕ ಸಮಸ್ಯೆಗಳನ್ನು ಸಂಬಂಧಪಟ್ಟ ಇಲಾಖೆಯವರಿಗೆ ದೂರವಾಣಿ ಮುಖಾಂತರ ಸಂಪರ್ಕಿಸಿ ಬಹುತೇಕ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲಾಗಿದೆ ಎಂದು ಸಾರ್ವಜನಿಕರು ಸಭೆಗೆ ತಿಳಿಸಿದ್ದರಿಂದ ಇಲ್ಲಿಯವರೆಗೆ ಕಿರಿಯ ಅಭಿಯಂತರರಾಗಿ ಕಾರ್ಯ ನಿರ್ವಹಿಸಿದ್ದ ಶ್ರೀ ರಾಜನ್ ರವರನ್ನು ಎಲ್ಲರೂ ಅಭಿನಂದಿಸಿ. ಇಂದಿನ ಸಭೆಯಲ್ಲಿ ಹೊಸದಾಗಿ ಚರ್ಚಿಸಿದ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳುವಂತೆ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಗೆ ಹಾಜರಾಗಿದ್ದ ಸಮಿತಿಯ ಸಭೆಯನ್ನು ಸಾರ್ವಜನಿಕರನ್ನು ಹಾಗೂ ಇತರೆ ಇಲಾಖೆಗಳಿಂದ ಹಾಜರಾಗಿದ್ದ ಅಧಿಕಾರಿ / ನೌಕರರನ್ನು ಸಮಿತಿಯ ಕಾರ್ಯದರ್ಶಿಗಳನ್ನು ವಂದಿಸಿ ನೋಡಲ್ ಅಧಿಕಾರಿಗಳ ಅಪ್ಪಣೆಯ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

19/12/2020
ಸಿ.ವಿ.ಲಕ್ಷ್ಮಣಪ್ಪ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ ಸದಸ್ಯರು
ಹೆಚ್.ಬಿ.ಆರ್ ಲೇಔಟ್

19/12/2020
(ಹೆಚ್.ವಿ.ನರೇಂದ್ರ ಕುಮಾರ್)
ಸಹಾಯಕ ನಿರ್ದೇಶಕರು, ನಗರ ಯೋಜನೆ ವಾರ್ಡ್ ಸಂಖ್ಯೆ.24
(ಉತ್ತರ) ನೋಡಲ್ ಅಧಿಕಾರಿ & ವಾರ್ಡ್ ಸಮಿತಿ
ಅಧ್ಯಕ್ಷರು, ವಾರ್ಡ್ ಸಂಖ್ಯೆ.24

ಪ್ರತಿಯನ್ನು:

1. ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ) ಪೂರ್ವ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಫ್ರೇಜರ್‌ಟೌನ್ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪೂರ್ವ) ರಸ್ತೆ ಮೂಲಭೂತ ಸೌಕರ್ಯ, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ (ಪೂರ್ವ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
11. ಪೊಲೀಸ್ ಇನ್ಸ್‌ಪೆಕ್ಟರ್, (ಸಂಚಾರ) ಕೆ.ಜಿ.ಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
12. ಪೊಲೀಸ್ ಇನ್ಸ್‌ಪೆಕ್ಟರ್ (ಕಾನೂನು ಮತ್ತು ಸುವ್ಯವಸ್ಥೆ) ಕೆ.ಜಿ.ಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
13. ಕಲ್ಯಾಣ ಇಲಾಖೆ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
14. ಪಶು ಸಂಗೋಪನಾ ಇಲಾಖೆ, (ಪೂರ್ವ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
15. ಕಛೇರಿ ಕಡತಕ್ಕೆ.